**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. 01/2025**

ಪಿರ್ಯಾದಿ : ಸರಕಾರದ ಪರವಾಗಿ
ಪೋಲಿಸ್ ನಿರೀಕ್ಷಕರು,
ಹೊನ್ನಾವರ ಪೊಲೀಸ್ ಠಾಣೆ (ಉ.ಕ.)

**–ವಿರುದ್ಧ–**

ಆರೋಪಿಃ : ಪಂಚಾಕ್ಷರಯ್ಯಾ.ತಂದೆ ಸಿದ್ದಯ್ಯಾ
ವಯಸ್ಸುಃ 24 ವರ್ಷಗಳು,
ಉದ್ಯೋಗಃ ಚಾಲಕ
ಸಾಕೀನಃ ಕಿನ್ನಾಳರೋಡ, ಪ್ರಗತಿನಗರ, ಕೊಪ್ಪಳ.
ಹಾಲಿ ವಾಸಃ ಟಿ.ಬೇಗೂರು, ಗಣೇಶಪ್ಪ ಲೇಔಟ್,
4 ನೇ ಕ್ರಾಸ್, ಮನೆ ನಂ. 120, ನೆಲಮಂಗಲ,
ಬೆಂಗಳೂರು.

**ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ**

ಪ್ರಶ್ನೆ.1: ನೀವು ಅಭಿಯೋಜಕರ ಪರ ಸಾಕ್ಷಿದಾರರ ಸಾಕ್ಷಿ ಹೇಳಿಕೆಯನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ.2: ಫ್ರಾಸಾ–1 ಇಸ್ಮಾಯಿಲ್ ಅಬ್ದುಲ್ ಖಾದೀರ್ ಸವಣೂರು ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 28–06–2024 ರಂದು ಸದರಿ ಅಬ್ದುಲ್ ವಾಜಿದ್ ಅವರು ತನ್ನ ಹೆಂಡತಿಯ ಜೊತೆ ಓಮಿನಿ ಕಾರಿನಲ್ಲಿ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪಕ್ಕೆ ಹೋಗಿ ಬರುವುದಾಗಿ ಹೇಳಿ ಹೋಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.3: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಸಂಜೆ 05–10 ರ ಸಮಯಕ್ಕೆ ಅವರ ಹೆಂಡತಿ ಗುಲ್ಸಾನ್ ಆರಾ ರವರು ತನಗೆ ಫೋನ್ ಮಾಡಿ ತಾವು ಗೇರುಸೊಪ್ಪಾ ಡ್ಯಾಮ್ ಹತ್ತಿರ

ಹೋಗುತ್ತಿದ್ದಾಗ ಎದುರಿನಿಂದ ಒಂದು ಮಿನಿ ಬಸ್ ಬಲಭಾಗಕ್ಕೆ ಬಂದು ನಮ್ಮ ಕಾರಿಗೆ ಡಿಕ್ಕಿ ಮಾಡಿ ಅಪಘಾತ ಆಗಿರುವುದಾಗಿ ತಿಳಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.4: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಗಂಡ ಹೆಂಡತಿ ಇಬ್ಬರಿಗೂ ಗಾಯಗಳಾಗಿದ್ದು, ತಕ್ಷಣ ತಾನು ಹೊನ್ನಾವರಕ್ಕೆ ಬಂದಾಗ ಆ ವೇಳೆಗೆ ವಾಜಿದ್ ರವರನ್ನು ಉಡುಪಿಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿರುವುದಾಗಿ ತಿಳಿಸಿದರು, ಆದರೆ ಅದೇ ದಿನ 06–30 ಕ್ಕೆ ಆತ ಮೃತಪಟ್ಟಿರುವುದಾಗಿ ಮಾಹಿತಿ ಬಂದಿರುವುದರಿಂದ ತಾನು ಪೋಲೀಸ್ ಠಾಣೆಗೆ ಹೋಗಿ ಈ ಬಗ್ಗೆ ದೂರು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.5: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 29–06–2024 ರಂದು ಸಂಜೆ 06–00 ಗಂಟೆ ಸಮಯಕ್ಕೆ ಪೋಲಿಸರು ತನ್ನನ್ನು ಘಟನಾ ಸ್ಥಳಕ್ಕೆ ಕರೆಸಿದ್ದು ಚಾಸಾ–7 ರವರು ತೋರಿಸಿದ ಅಪಘಾತದ ಸ್ಥಳದಲ್ಲಿ ಪೋಲಿಸರು ಸ್ಥಳ ಪಂಚನಾಮೆ ಮಾಡಿ, ಸ್ಥಳದಲ್ಲಿ ಒಂದು ನಕಾಶೆ ತಯಾರಿಸಿ ಫೋಟೋ ತೆಗೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.6: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಪಘಾತ ಸ್ಥಳದಲ್ಲಿ ಅಪಘಾತ ಪಡಿಸಿದ ಮಿನಿ ಬಸ್ಸು ಮತ್ತು ಓಮಿನಿ ಕಾರ್ ಸ್ಥಳದಲ್ಲೇ ಇದ್ದು, ಅವುಗಳನ್ನು ಚಾಸಾ–7 ರವರು ಗುರುತಿಸಿದ್ದು, ಆ ಕಾಲಕ್ಕೆ ಪೋಲೀಸರು ಫೋಟೋ ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.7: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮಿನಿ ಬಸ್ ಚಾಲಕನಿಂದ ಅಪಘಾತ ಆಗಿದೆ ಅಂತ ಗೊತ್ತಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.8: ಫ್ರಾಸಾ–2 ಮೊಹಮ್ಮದ್ ತಾಹಿರ್ ಮಸ್ತಾನಾ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 29–06–2024 ರಂದು ಗೇರುಸೊಪ್ಪಾದ ಡ್ಯಾಮ್ ಹತ್ತಿರ ಒಂದು ಮಿನಿ ಬಸ್ ಮತ್ತು ಓಮಿನಿಕಾರಿನ ನಡುವೆ

ಅಪಘಾತ ಆಗಿದ್ದು ಸದರಿ ಸ್ಥಳದಲ್ಲಿ ಚಾಸಾ-7 ರವರು ತೋರಿಸಿದ ಸ್ಥಳದಲ್ಲಿ ಸಂಜೆ 04-00 ಗಂಟೆ ಸಮಯಕ್ಕೆ ಪೋಲಿಸರು ತನ್ನ ಮತ್ತು ಚಾಸಾ-2 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಸ್ಥಳದಲ್ಲಿ ಒಂದು ಕಚ್ಚಾ ನಕಾಶೆ ತಯಾರಿಸಿ, ಸ್ಥಳದಲ್ಲಿ ಫೋಟೋ ತೆಗೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.9: ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಕಾಲಕ್ಕೆ ಅಪಘಾತಪಡಿಸಿದ ಮಿನಿ ಬಸ್ಸು ಮತ್ತು ಟೆಂಪೋ ಇದ್ದು ಪೋಲೀಸರು ಅವುಗಳ ಫೋಟೋವನ್ನೂ ಸಹ ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.10: ಫ್ರಾಸಾ-3 ಗುಲಶಾನ್ ಆರಾ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 28-06-2024 ರಂದು ತಾನು ಮತ್ತು ತನ್ನ ಗಂಡ ಶಿರಾಳಕುಪ್ಪಕ್ಕೆ ಹೋಗಲು ಓಮಿನಿ ಕಾರ ನಂ. ಕೆಎ-15-7831 ರಲ್ಲಿ ಭಟ್ಕಳದಿಂದ ಹೊರಟಿದ್ದು, ಸದರಿ ಓಮಿನಿ ಕಾರನ್ನು ತನ್ನ ಗಂಡ ಓಡಿಸುತ್ತಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.11: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮದ್ಯಾಹ್ನ 2.00 ಗಂಟೆಗೆ ಭಟ್ಕಳದಿಂದ ಹೊರಟಿದ್ದು ಸಂಜೆ 4.30 ಗಂಟೆಯ ವೇಳೆಗೆ ಗೇರುಸೊಪ್ಪದ ಕೆಪಿಸಿ ಡ್ಯಾಮ್ ಹತ್ತಿರ ಹೋಗುತ್ತಿದ್ದಾಗ ಎದುರುಗಡೆಯಿಂದ ಒಂದು ಮಿನಿ ಬಸ್ ಬರುತ್ತಿದ್ದು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ತಮ್ಮ ಕಡೆ ಬಂದು ತನ್ನ ಗಂಡ ರಸ್ತೆಯ ಎಡಭಾಗದಲ್ಲಿ ನಿಧಾನವಾಗಿ ಹೋಗುತ್ತಿದ್ದರು ಎದುರುಗಡೆಯಿಂದ ಬರುತ್ತಿದ್ದ ಮಿನಿ ಬಸ್ಸ ತಮ್ಮ ಓಮಿನಿ ಕಾರಗೆ ಡಿಕ್ಕಿಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.12: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಅಪಘಾತದಿಂದ ತನ್ನ ಗಂಡನಿಗೆ ತಲೆಗೆ, ಮುಖಕ್ಕೆ, ಕೈಗೆ ಗಾಯ ಹಾಗೂ ತನಗೆ ಎರಡು ಕೈಗೆ ಹಾಗೂ ಕಾಲುಗಳಿಗೆ ಏಟಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 13: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಮಗೆ ಅಪಘಾತ ಮಾಡಿದ ಮಿನಿ ಬಸ್ಸ ನಂ. ಕೆಎ-51-7023 ಆಗಿದ್ದು, ಸದರಿ ಬಸ್ಸನ ಚಾಲಕನನ್ನು ತಾನು ನೋಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 14: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಪಘಾತ ಸ್ಥಳದಲ್ಲಿ ಇದ್ದವರು ತನ್ನನ್ನು ಹಾಗೂ ತನ್ನ ಗಂಡನನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ತನ್ನ ಗಂಡನನ್ನು ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿಯ ಆಸ್ಪತ್ರೆಗೆ ಕರೆದುಕೊಂಡು ಹೋದರು, ಆದರೆ ಅದೇ ದಿನ ಸಂಜೆ 6.30 ರ ಸಮಯಕ್ಕೆ ತನ್ನ ಗಂಡ ಮೃತಪಟ್ಟ ವಿಚಾರ ತಿಳಿಯಿತು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 15: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಎದುರಿನಿಂದ ಬಂದ ಮಿನಿ ಬಸ್ಸ ಚಾಲಕ ಬಸ್ಸನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ತಾವು ಹೋಗುತ್ತಿದ್ದ ಕಡೆಗೆ ಬಂದು ತಮಗೆ ಎದುರಿನಿಂದ ಡಿಕ್ಕಿ ಪಡಿಸಿದ್ದರಿಂದ ಸದರಿ ಅಪಘಾತ ಆಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 16: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಬಸ್ಸನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 17: ಫ್ರಾಸಾ-4 ಅಮಾನುಲ್ಲಾ ಖಾನ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 28-06-2024 ರಂದು ತಾನು ಮತ್ತು ಚಾಸಾ-6 ರವರು ಸಿದ್ದಾಪುರಕ್ಕೆ ಹೋಗಲು ಹೊನ್ನಾವರ ಸಾಗರ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾಸಾ-6 ರವರ ಬೈಕಿನಲ್ಲಿ ಹೋಗುತ್ತಿದ್ದಾಗ ಸಂಜೆ 4-30 ರ ಸಮಯಕ್ಕೆ ಗೇರುಸೊಪ್ಪ ಡ್ಯಾಮ ಹತ್ತಿರ ಹೋಗುತ್ತಿದ್ದಾಗ ತಮ್ಮ ಮುಂಭಾಗದಲ್ಲಿ ಒಂದು ಓಮಿನಿ ಕಾರ ಹೋಗುತ್ತಿತ್ತು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.18: ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಕಾಲಕ್ಕೆ ಎದುರಿನಿಂದ ಒಂದು ಮಿನಿ ಬಸ್ಸ ಬರುತ್ತಿದ್ದು, ಬಸ್ಸ ಚಾಲಕ ಬಸ್ಸನ್ನು ಎಡಭಾಗಕ್ಕೆ ತಿರುಗಿಸಿ ತಮ್ಮ ಮುಂದೆ ಹೋಗುತ್ತಿದ್ದ ಓಮಿನಿ ಕಾರಿಗೆ ಡಿಕ್ಕಿಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.19: ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾವು ಬೈಕ್ ನಿಲ್ಲಿಸಿ ನೋಡಲಾಗಿ ಓಮಿನಿ ಚಾಲಕನಿಗೆ ಮುಖದ ಮೇಲೆ ರಕ್ತ ಬರುತ್ತಿದ್ದು, ಆತನ ಜೊತೆ ಆತನ ಹೆಂಡತಿ ಸಹ ಇದ್ದು, ಅವರಿಗೂ ಗಾಯಗಳಾಗಿದ್ದು, ತಕ್ಷಣ ಅವರಿಗೆ ನೀರು ಕುಡಿಸಲು ಪ್ರಯತ್ನಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.20: ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪೊಲೀಸರಿಗೆ ಫೋನ್ ಮಾಡಲಾಗಿ ರಾಷ್ಟ್ರೀಯ ಹೆದ್ದಾರಿಯ ಗಸ್ತುವಾಹನ ಬಂದಿದ್ದು, ನಂತರ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ತದ ನಂತರ ಓಮಿನಿ ಚಾಲಕ ಮೃತಪಟ್ಟ ವಿಚಾರ ಗೊತ್ತಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.21: ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮರುದಿನ ಸಂಜೆ 4.00 ರಿಂದ 5.00 ಗಂಟೆ ಸಮಯಕ್ಕೆ ಪೊಲೀಸರು ತನ್ನನ್ನು ಅಪಘಾತ ಸ್ಥಳಕ್ಕೆ ಕರೆಸಿದ್ದು, ತಾನು ಅಪಘಾತ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು, ಸದರಿ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿ ತಾನು ಸಾಕ್ಷಿ ಸಹಿ ಹಾಕಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.22: ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಂಚನಾಮೆಯ ಕಾಲಕ್ಕೆ ಅಪಘಾತಕ್ಕೆ ಒಳಗಾಗಿದ್ದ ಎರಡು ವಾಹನಗಳು ಸ್ಥಳದಲ್ಲೇ ಇದ್ದು, ಪೊಲೀಸರು ಸ್ಥಳ ಪಂಚನಾಮೆಯ ಕಾಲಕ್ಕೆ ಸ್ಥಳದ ಹಾಗೂ ವಾಹನಗಳ ಫೋಟೋ ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ23: ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಪಘಾತಪಡಿಸಿದ ಬಸ್ಸ ನಂ. ನೋಡಲಾಗಿ ಕೆಎ–51–ಎಡಿ–7023 ಆಗಿದ್ದು, ಸ್ಥಳದಲ್ಲಿ ಬಸ್ಸ ಚಾಲಕನನ್ನು ನೋಡಿದ್ದು, ಆತನನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ24: ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮಿನಿ ಬಸ್ಸ ಚಾಲಕ ಬಸ್ಸನ್ನು ವೇಗವಾಗಿ ಚಾಲಯಿಸಿಕೊಂಡು ಎಡ ಭಾಗದಲ್ಲಿ ಬರುತ್ತಿದ್ದವರು ರಸ್ತೆಯ ಬಲಭಾಗಕ್ಕೆ ತಿರುಗಿಸಿ ಎದುರಿಗೆ ಹೋಗುತ್ತಿದ್ದ ಓಮಿನಿ ಕಾರಿಗೆ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿದ್ದು, ಬಸ್ಸ ಚಾಲಕನ ತಪ್ಪಿಂದಲೇ ಅಪಘಾತ ಆಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ25: ಫ್ರಾಸಾ–5 ಕಾರವಾರ ನಗರ ಠಾಣೆಯ ಸಹಾಯಕ ಆರಕ್ಷಕ ಉಪ–ನಿರೀಕ್ಷಕರಾದ ಶಿವರಾಮ ಶಂಕರ ದೇಸಾಯಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28–06–2024 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 11–10 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.145/2024 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ26: ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 29–06–2024 ರಂದು ಸಂಜೆ 04–00 ರಿಂದ 05–30 ರ ಸಮಯಕ್ಕೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ತಯಾರಿಸಿ ಫೋಟೋ ತೆಗೆಸಿ ಸ್ಥಳದಲ್ಲಿ ಅಪಘಾತಕ್ಕೊಳಗಾಗಿದ್ದ ಕಾರು ಮತ್ತು ಬಸ್ಸುಗಳನ್ನು ಅಮಾನತ್ತುಪಡಿಸಿಕೊಂಡು ಚಾಸಾ–6 ಮತ್ತು 7 ರವರ ಹೇಳಿಕೆ ಪಡೆದು ನಂತರ ಕೇಸಿನ ಕಡತವನ್ನು ಚಾಸಾ–17 ರವರಿಗೆ ವಹಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ27: ಫ್ರಾಸಾ-6 ಸೂಳ್ಯ ವೃತ್ತದ ವೃತ್ತ-ನಿರೀಕ್ಷಕರಾದ ತಿಮ್ಮಪ್ಪ ವೆಂಕಪ್ಪ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01-07-2024 ರಂದು ಕೇಸಿನ ಕಡತವನ್ನು ಚಾಸಾ-16 ರವರಿಂದ ಪಡೆದುಕೊಂಡು ಅದೇ ದಿನ ಚಾಸಾ-15 ರವರು ಮೃತನ ಶವ ಪಂಚನಾಮೆಯ ವರದಿಯನ್ನು ಹಾಜರುಪಡಿಸಿದ್ದು, ಅದನ್ನು ಪಡೆದು ಕಡತಕ್ಕೆ ಅಳವಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ28: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಬಸ್ಸ ಮಾಲೀಕ ಚಾಸಾ-9 ರವರಿಗೆ ಕಲಂ 133 ರಡಿಯಲ್ಲಿ ನೋಟೀಸ್ ಜಾರಿ ಮಾಡಿ ಆತನಿಂದ ಉತ್ತರವನ್ನು ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ29: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ-13 ರವರು ಹಾಜರುಪಡಿಸಿದ ವಾಹನಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸದರಿ ಬಸ್ಸನ್ನು ಆತನ ಮಧ್ಯಂತರ ಸ್ವಾಧೀನಕ್ಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ30: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆದೇ ದಿನ ಆರೋಪಿ ಠಾಣೆಗೆ ಹಾಜರಾಗಿದ್ದರಿಂದ ಆತನನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ31: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತನಿಖೆಯ ಕಾಲಕ್ಕೆ ಪೊಟೋ ತೆಗೆದ ಬಗ್ಗೆ ಚಾಸಾ-13 ರವರಿಂದ ಕಲಂ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ32: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 10-07-2024 ರಂದು ಮೃತನ ಪಿ ಎಂ ವರದಿಯನ್ನು ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ33: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 09–09–2024 ರಂದು ಅಪಘಾತಕ್ಕೊಳಗಾಗಿದ್ದ ಓಮಿನಿ ವಾಹನದ ಮಾಲೀಕರಾದ ಚಾಸಾ–8 ರವರಿಗೆ ಕಲಂ 133 ರಡಿಯಲ್ಲಿ ನೊಟೀಸ್ ನೀಡಿ ಉತ್ತರವನ್ನು ಪಡೆದು ಚಾಸಾ–8 ರವರು ಹಾಜರುಪಡಿಸಿದ ವಾಹನಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸದರಿ ಓಮಿನಿಯನ್ನು ಆತನ ಮಧ್ಯಂತರ ಸ್ವಾಧೀನಕ್ಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ34: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 15–09–2024 ರಂದು ಐ ಎಂ ವಿ ವರದಿಯನ್ನು ಹಾಗೂ ಗಾಯಾಳುಗಳ ಗಾಯದ ಪ್ರಮಾಣ ಪತ್ರವನ್ನು ಪಡೆದು ತನಿಖೆ ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ35: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ36: ಫ್ರಾಸಾ–7 ಅಸ್ಲಮ್ ಬುಡಾನ್ ಖಾನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 28–06–2024 ರಂದು ತಾನು ಮತ್ತು ಚಾಸಾ–7 ಬೈಕಿನಲ್ಲಿ ಸಿದ್ದಾಪುರಕ್ಕೆ ಹೋಗಲು ಹೋಗುತ್ತಿದ್ದು, ಬೈಕನ್ನು ತಾನು ಓಡಿಸುತ್ತಿದ್ದು, ಸಂಜೆ 4.30 ರ ಸಮಯಕ್ಕೆ ಗೇರುಸೊಪ್ಪ ಡ್ಯಾಮ ಹತ್ತಿರ ಹೋಗುತ್ತಿದ್ದಾಗ ತಮ್ಮ ಮುಂಭಾಗದಲ್ಲಿ ಒಂದು ಓಮಿನಿ ಕಾರ ಹೋಗುತ್ತಿತ್ತು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ37: ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಕಾಲಕ್ಕೆ ಎದುರಿನಿಂದ ಒಂದು ಮಿನಿ ಬಸ್ಸ ಬರುತ್ತಿದ್ದು, ಬಸ್ಸ ಚಾಲಕ ಬಸ್ಸನ್ನು ಎಡಭಾಗಕ್ಕೆ ತಿರುಗಿಸಿ ತಮ್ಮ ಮುಂದೆ ಹೋಗುತ್ತಿದ್ದ ಓಮಿನಿ ಕಾರಗೆ ಡಿಕ್ಕಿಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.38: ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾವು ಬೈಕ್ ನಿಲ್ಲಿಸಿ ನೋಡಲಾಗಿ ಓಮಿನಿ ಚಾಲಕನಿಗೆ ತುಂಬಾ ಗಾಯಗಳಾಗಿದ್ದು, ಆತನ ಜೊತೆ ಆತನ ಹೆಂಡತಿ ಸಹ ಇದ್ದು, ಆಕೆಗೂ ಸಹ ಗಾಯಗಳಾಗಿದ್ದು ತಕ್ಷಣ ತಾವು ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಬಂದು ನಂತರ ಅವರನ್ನು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ತದ ನಂತರ ಓಮಿನಿ ಚಾಲಕ ಮೃತಪಟ್ಟ ವಿಚಾರ ಗೊತ್ತಾಯಿತು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.39: ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಪಘಾತಪಡಿಸಿದ ಬಸ್ ಚಾಲಕನನ್ನು ನೋಡಿದ್ದು, ಆತನನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.40: ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮಿನಿ ಬಸ್ಸ ಚಾಲಕ ಬಸ್ಸನ್ನು ವೇಗವಾಗಿ ಚಲಾಯಿಸಿಕೊಂಡು ಎಡ ಭಾಗದಲ್ಲಿ ಬರುತ್ತಿದ್ದವರು ರಸ್ತೆಯ ಬಲಭಾಗಕ್ಕೆ ತಿರುಗಿಸಿ ಎದುರಿಗೆ ಹೋಗುತ್ತಿದ್ದ ಓಮಿನಿ ಕಾರಿಗೆ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿದ್ದು, ಬಸ್ಸ ಚಾಲಕನ ತಪ್ಪಿಂದಲೇ ಅಪಘಾತ ಆಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 41:ನೀವು ಹೇಳುವುದಾದರು ಏನು ಇದೆಯೇ?

ಉತ್ತರಃ

ಪ್ರಶ್ನೆ 42: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?

ಉತ್ತರಃ

(ಆರೋಪಿಯ ಹೇಳಿಕೆಯನ್ನ ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಆತ ಹೇಳಿದ ಉತ್ತರಗಳನ್ನು ನನ್ನ ಸ್ವಹಸ್ತಾಕ್ಷರದಿಂದ ಬರೆದುಕೊಂಡಿರುತ್ತೇನೆ.)

**Sd/-**

**ಸ್ಥಳಃ ಹೊನ್ನಾವರ** **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ದಿನಾಂಕಃ 17-03-2026** **ಪ್ರ.ದ.ನ್ಯಾ ದಂಡಾಧಿಕಾರಿಗಳು, ಹೊನ್ನಾವರ**